"ಮಧುರ ಮಕ್ಕಳೇ - ಸದಾ ನಾವು ಶಿವವಂಶಿ, ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರಾಗಿದ್ದೇವೆ, ನಮ್ಮ ಈಶ್ವರೀಯ ಕುಲ ಎಲ್ಲದಕ್ಕಿಂತ ಶ್ರೇಷ್ಠ ಕುಲವಾಗಿದೆ ಎಂದು ನಶೆಯಲ್ಲಿ ಇರಬೇಕು"

ಪ್ರಶ್ನೆ: ತಮಗೆ ಮನೆಗೆ ಹೋಗುವ ಲಿಫ್ಟ್ ಯಾವಾಗ ಸಿಗುತ್ತದೆ? ಆ ಲಿಫ್ಟ್ನ್ನು ಯಾರು ಏರಬಹುದು?

ಉತ್ತರ: ಈಗ ಸಂಗಮಯುಗದಲ್ಲಿಯೇ ಮನೆಗೆ ಹೋಗುವ ಲಿಫ್ಟ್ ಸಿಕ್ಕಿದೆ. ಎಲ್ಲಿಯತನಕ ತಂದೆಯವರು ಆಗಿರುವುದಿಲ್ಲವೋ, ಬ್ರಾಹ್ಮಣರು ಆಗಿರುವುದಿಲ್ಲವೋ ಅಲ್ಲಿಯ ತನಕ ಲಿಫ್ಟಿನಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಲಿಫ್ಟಿನಲ್ಲಿ ಕುಳಿತುಕೊಳ್ಳಲು ಪವಿತ್ರರಾಗಬೇಕು ಹಾಗೂ ಸ್ವದರ್ಶನಚಕ್ರವನ್ನು ತಿರುಗಿಸಿಬೇಕು-ಇದೇ ರೆಕ್ಕೆಗಳ ಹಾಗೆ ಕೆಲಸ ಮಾಡುತ್ತದೆ. ಈ ರೆಕ್ಕೆಗಳ ಆಧಾರದಿಂದ ಮನೆಗೆ ಹೋಗಬಹುದು.

ಗೀತೆ: ಧೈರ್ಯ ತಾಳು ಮಾನವನೇ.......................................

ಓಂ ಶಾಂತಿ. ಮಧುರಾತಿ ಮಧುರ ಸಂಗಮಯುಗಿ ಬ್ರಾಹ್ಮಣರು ಯಾರಿಗೆ ಸ್ವದರ್ಶನಚಕ್ರಧಾರಿ ಎಂದು ಹೇಳುತ್ತಾರೋ ಅವರು ಈಗ ಗುಪ್ತವೇಷದಲ್ಲಿ ಓದುತ್ತಿದ್ದಾರೆ. ಇದು ಸಂಗಮಯುಗಿ ಬ್ರಹ್ಮಾ ಮುಖವಂಶಾವಳಿ ಎಂದು ನಿಮಗೆ ಯಾರೂ ತಿಳಿಸಲು ಸಾಧ್ಯವಿಲ್ಲ. ನಾವು ಶಿವವಂಶಿ ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರೆಂದು ನೀವು ತಿಳಿದಿದ್ದೀರಿ. ಬಾಕಿ ಮನುಷ್ಯ ಮಾತ್ರರೆಲ್ಲರೂ ಆಸುರಿ ಕುಲದವರಾಗಿದ್ದಾರೆ. ಈಶ್ವರನೇ ತನ್ನ ಜೊತೆ ಕರೆದುಕೊಂಡುಹೋಗಲು ತನ್ನವರನ್ನಾಗಿ ಮಾಡಿಕೊಂಡಿದ್ದಾರೆ. ಆತ್ಮ ಪತಿತವಾಗಿದೆ ಎಂದು ಮಕ್ಕಳು ತಿಳಿದುಕೊಂಡಿದ್ದಾರೆ ಎಂದಾಗ ತಂದೆಗೂ ಸಹ ಗೊತ್ತಿದೆ. ಈಗ ಪಾವನರಾಗಬೇಕು. ಈಗ ನಾವು ಶಿವವಂಶಿ, ಬ್ರಹ್ಮಾಮುಖವಂಶಾವಳಿ ಎಂದು ಮಕ್ಕಳಿಗೆ ನಿಶ್ಚಯವಿದೆ. ನಿಮ್ಮ ಹೆಸರೇ ಬ್ರಹ್ಮಾಕುಮಾರ-ಕುಮಾರಿ ಆಗಿದೆ. ಪೂರ್ತಿ ಪ್ರಪಂಚ ಶಿವವಂಶ ಆಗಿದೆ. ಯಾವಾಗ ಶಿವತಂದೆಯನ್ನು ಅರಿತುಕೊಂಡಿದ್ದೀರೋ ಆಗ ಬ್ರಾಹ್ಮಣಕುಲಭೂಷಣರೂ ಸಹ ಆಗಿದ್ದೀರಿ. ಈ ಸಮಯದಲ್ಲಿ ನೀವು ಸಾಕಾರದಲ್ಲಿ ತಂದೆಯವರಾಗಿದ್ದೀರಿ. ಇಲ್ಲವೆಂದರೆ ನಿರಾಕಾರಿ ಪ್ರಪಂಚದಲ್ಲಿ ಇದ್ದಾಗ ಸರ್ವೋತ್ತಮ ಶಿವವಂಶದವರಾಗಿದ್ದೀರಿ. ಆದರೆ ಯಾವಾಗ ಸಾಕಾರದಲ್ಲಿ ಬಾಬಾ ಬರುತ್ತಾರೋ ಆಗ ನೀವು ಬ್ರಹ್ಮಾಮುಖವಂಶಾವಳಿ ಆಗುತ್ತೀರಿ. ಒಂದು ಸೆಕೆಂಡಿನಲ್ಲಿ ತಂದೆ ಹೇಗಿದ್ದವರನ್ನು ಹೇಗೆ ಮಾಡುತ್ತಾರೆ. ತಂದೆ ಹೇಳಿದ್ದಾರೆ ಹಾಗೂ ಮಕ್ಕಳು ಆಗಿಬಿಟ್ಟಿದ್ದಾರೆ. ಹೇಗೆ ಆತ್ಮ ಮುಖದಿಂದ ಹೇಳುತ್ತದೆ ಆದರೆ ನೋಡಲು ಆಗುವುದಿಲ್ಲ. ಹಾಗೆಯೇ ನಾನು ಈ ಸಮಯದಲ್ಲಿ ಬಂದಿದ್ದೇನೆ ಹಾಗೂ ಮಾತನಾಡುತ್ತಿದ್ದೇನೆ. ಹೇಗೆ ನಿಮಗೆ ಎಲ್ಲಿಯವರೆಗೂ ಶರೀರ ಸಿಗುವುದಿಲ್ಲವೋ ಅಲ್ಲಿಯವರೆಗೂ ಪಾರ್ಟ್ ಮಾಡಲು ಸಾಧ್ಯವಿಲ್ಲ. ನೀವಂತೂ ಬಾಲ, ಯುವ, ವೃದ್ಧ ಅವಸ್ಥೆಯಲ್ಲಿ ಬರುತ್ತೀರಿ. ನಾನು ಈ ಅವಸ್ಥೆಗಳಲ್ಲಿ ಬರುವುದಿಲ್ಲ, ಆಗ ನನ್ನ ಜನ್ಮ ದಿವ್ಯ, ಅಲೌಕಿಕವಾಗಿದೆ ಎಂದು ಹೇಳುತ್ತಾರೆ. ನೀವಂತೂ ಗರ್ಭದಲ್ಲಿ ಪ್ರವೇಶ ಮಾಡುತ್ತೀರಿ. ಅನೇಕ ಜನ್ಮಗಳ ಕೊನೆಯ ಜನ್ಮದಲ್ಲಿ ನಾನು ಬ್ರಹ್ಮನ ವಾನಪ್ರಸ್ಥ ಅವಸ್ಥೆಯಲ್ಲಿ ಪ್ರವೇಶ ಮಾಡುತ್ತೇನೆ ಎಂದು ತಂದೆ ಸ್ವಯಂ ಹೇಳುತ್ತಾರೆ ಮತ್ತೆ ನಿಮಗೆ ನಾನು ಓದಿಸುತ್ತೇನೆ. ನಿಮಗೆ ಯಾವುದೇ ಮನುಷ್ಯರು ಓದಿಸುವುದಿಲ್ಲ ಏಕೆಂದರೆ ಯಾವುದೇ ಮನುಷ್ಯರಲ್ಲಿ ಜ್ಞಾನವಿಲ್ಲ. ಪತಿತಪಾವನ ಬನ್ನಿ ಎಂದು ಕರೆಯುತ್ತಾರೆ ಅಂದಾಗ ಪತಿತಪಾವನ ಯಾರು? ಕೃಷ್ಣ ಅಂತೂ ಸತ್ಯಯುಗದ ಮೊದಲನೆಯ ರಾಜಕುಮಾರನಾಗಿದ್ದಾನೆ. ಅವರು ಪತಿತಪಾವನ ಆಗಲು ಸಾಧ್ಯವಿಲ್ಲ. ಸಾಯುವ ಸಮಯದಲ್ಲಿ ಮನುಷ್ಯರು ರಾಮ-ರಾಮ ಎಂದು ಹೇಳಿ ಎನ್ನುತ್ತಾರೆ, ಯಾರಿಗಾದರು ಮರಣದ ಶಿಕ್ಷೆ ಕೊಟ್ಟಾಗ ಭಗವಂತ ತಂದೆಯನ್ನು ನೆನಪು ಮಾಡಿ ಎಂದು ಹೇಳುತ್ತಾರೆ ಏಕೆಂದರೆ ಅವರೇ ಸುಖದಾತನಾಗಿದ್ದಾರೆ. ತಂದೆಯೇ ಬಂದು ರಹಸ್ಯಗಳನ್ನು ತಿಳಿಸುತ್ತಾರೆ, ಇದು ಸಂಗಮಯುಗವಾಗಿದೆ ನಂತರ ನಮ್ಮ ಸುಖದ ದಿನಗಳು ಬರಲಿದೆ. 84 ಜನ್ಮಗಳು ಪೂರ್ತಿ ಆಗಿದೆ. ಈಗ ಸಂಗಮಯುಗದ ಸೌಭಾಗ್ಯದ ಸಮಯವಾಗಿದೆ. ಮೇಲೆ ಏರಲು (ಉನ್ನತಿ ಮಾಡಿಕೊಳ್ಳಲು) ಇದು ಒಂದೇ ಯುಗವಾಗಿದೆ. ಮೇಲೆ ಹೋಗಲು ಲಿಫ್ಟ್ ಸಿಕ್ಕಿದೆ. ಆದರೆ ಎಲ್ಲಿಯವರೆವಿಗೂ ಪವಿತ್ರರಾಗುವುದಿಲ್ಲವೋ, ಸ್ವದರ್ಶನಚಕ್ರವನ್ನು ತಿರುಗಿಸುವುದಿಲ್ಲವೋ ಅಲ್ಲಿಯವರೆಗು ಲಿಫ್ಟಿನಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಈ ಸಮಯದಲ್ಲಿ ರೆಕ್ಕೆಗಳು ಸಿಗುತ್ತಿದೆ, ಮಾಯೆ ರೆಕ್ಕೆಗಳನ್ನು ಕತ್ತರಿಸಿದೆ. ಯಾವಾಗ ತಂದೆಯವರಾಗುತ್ತೀರೋ, ಬ್ರಾಹ್ಮಣರಾಗುತ್ತೀರೋ, ಆಗಷ್ಟೇ ರೆಕ್ಕೆಗಳು ಸಿಗುವುದು. ಈಗ ಸಂಗಮಯುಗದಲ್ಲಿ ಬ್ರಾಹ್ಮಣರು ಪುನಃ ದೇವತೆ ಆಗುತ್ತಾರೆ. ಈಗ ನೀವು ಸಂಗಮಯುಗದವರಾಗಿದ್ದೀರಿ ಹಾಗೂ ಸತ್ಯಯುಗದಲ್ಲಿ ಹೋಗುವ ಪುರುಷಾರ್ಥವನ್ನು ಮಾಡುತ್ತಿದ್ದೀರಿ. ಎಲ್ಲರಿಗಾಗಿ ಸುಖದ ದಿನಗಳು ಬರುತ್ತಿದೆ. ನಿಮಗೆ ಧೈರ್ಯ ಸಿಗುತ್ತಿದೆ. ಪ್ರಪಂಚ ಘೋರ ಅಂಧಕಾರದಲ್ಲಿ ಇದೆ.

ನಿಮಗೆ ಸ್ವದರ್ಶನ ಚಕ್ರಧಾರಿ ಬ್ರಾಹ್ಮಣರೆಂದು ತಂದೆ ಹೇಳುತ್ತಾರೆ. ಇದು ಹೊಸಬರು ಕೇಳಿದಾಗ ಹೇಗೆ ಸ್ವದರ್ಶನಚಕ್ರಧಾರಿ ಆಗಲು ಸಾಧ್ಯ? ಸ್ವದರ್ಶನಚಕ್ರವಂತೂ ವಿಷ್ಣುಗೆ ಇದೆ ಎಂದು ಕೇಳುತ್ತಾರೆ. ಅಂದಾಗ ಎಷ್ಟು ಅಂತರವಿದೆ ನಿಮ್ಮ ಬುದ್ಧಿಯಲ್ಲಿ ಪೂರ್ತಿ ಚಕ್ರದ ಜ್ಞಾನವಿದೆ. ಈ ಸಮಯದಲ್ಲಿ ನಾವು ಈಶ್ವರೀಯ ಸಂತಾನರಾಗಿದ್ದೇವೆ ಮತ್ತೆ ದೈವೀ ಸಂತಾನ, ನಂತರ ವೈಶ್ಯ, ಶೂದ್ರ ಸಂತಾನರಾಗುತ್ತೇವೆ. ಈ ಸಮಯದಲ್ಲಿ ಎಲ್ಲದಕ್ಕಿಂತ ಶ್ರೇಷ್ಠ ಈಶ್ವರೀಯ ಕುಲವಾಗಿದೆ. ವಾಸ್ತವದಲ್ಲಿ ಪೂರ್ತಿ ಶಿವನ

ಮಹಿಮೆ ಆಗಿದೆ. ನಂತರ ಶಿವಶಕ್ತಿಯರ, ದೇವತೆಯರ ಮಹಿಮೆಯಾಗಿದೆ ಏಕೆಂದರೆ ನೀವು ಈ ಸಮಯದಲ್ಲಿ ಸೇವೆ ಮಾಡುತ್ತೀರಿ. ಯಾರು ಸೇವೆ ಮಾಡುತ್ತಾರೋ ಅವರಿಗೇ ಪದವಿ ಸಿಗುತ್ತದೆ. ನೀವು ಆತ್ಮಿಕ ಸಂಘಸೇವಕರಾಗಿದ್ದೀರಿ, ಶಾರೀರಿಕ ಸಂಘಸೇವಕರು ಬಹಳ ಜನ ಇದ್ದಾರೆ. ನಾವು ಅಶರೀರಿ ಆಗಿ ಬಂದಿದ್ದೇವೆ ಬಂದು ನಮ್ಮ ಸ್ವರಾಜ್ಯವನ್ನು ಪಡೆದುಕೊಂಡಿದ್ದೆವು ಎಂದು ನಿಮಗೆ ಈಗ ಆತ್ಮಿಕ ನಶೆ ಇದೆ. ಈಗ ನಿಮಗೆ ತಂದೆಯ ಮೂಲಕ ಜ್ಞಾನ ಸಿಕ್ಕಿದೆ. ಸ್ಮೃತಿಗೆ ಬಂದಿದೆ, ಇದಕ್ಕೆ ಸ್ಮೃತಿಲಬ್ಧ ಎಂದು ಕರೆಯುತ್ತಾರೆ. ನೀವೇ ದೇವತಾ, ಕ್ಷತ್ರಿಯರು ಆಗಿದ್ದೀರಿ ಎಂದು ತಂದೆಯೇ ಬಂದು ತಿಳಿಸುತ್ತಿದ್ದಾರೆ. ಈಗ 84 ಜನ್ಮಗಳ ನಂತರ ಬಂದು ಮಿಲನ ಮಾಡಿದ್ದೇವೆ. ಇದು ಆತ್ಮ ಹಾಗೂ ಪರಮಾತ್ಮನ ಸಂಗಮಯುಗದ ಕುಂಭಮೇಳವಾಗಿದೆ. ಪರಮಾತ್ಮನೇ ಬಂದು ಓದಿಸುತ್ತಿದ್ದಾರೆ ಅರ್ಥಾತ್ ಸರ್ವ ಶಾಸ್ತ್ರ ಶಿರೋಮಣಿ ಗೀತಾ ಜ್ಞಾನವನ್ನು ಕೊಡುತ್ತಿದ್ದಾರೆ. ಅವರು ಗೀತೆಯಲ್ಲಿ ಕೃಷ್ಣನ ಹೆಸರು ಹಾಕಿದ್ದಾರೆ. ಒಂದುವೇಳೆ ಕೃಷ್ಣ ಇದ್ದರೆ ಅವರಿಗೆ ಸಿಕ್ಕಿಹಾಕಿಕೊಳ್ಳುತ್ತಾರೆ ಏಕೆಂದರೆ ಅವರಲ್ಲಿ ಬಹಳ ಆಕರ್ಷಣೆ ಇದೆ. ಸತ್ಯಯುಗದ ಮೊದಲನೆಯ ರಾಜಕುಮಾರನಾಗಿದ್ದಾನೆ. ಕೃಷ್ಣನ ಆತ್ಮ ಈಗ ಕೇಳುತ್ತಿದೆ ಹಾಗೂ ಕೃಷ್ಣಪುರಿಗೆ ಹೋಗುವವರೂ ಸಹ ಕೇಳುತ್ತಿದ್ದಾರೆ. ನಾವೇ ಕೃಷ್ಣಪುರಿಯವರು ಅಥವಾ ಲಕ್ಷ್ಮೀ-ನಾರಾಯಣಪುರಿಯವರು ಎಂದು ಸ್ಮೃತಿಗೆ ಬಂದಿದೆ. ತಂದೆ ನಾಲೆಜ್ಫುಲ್ ಆಗಿದ್ದಾರೆ. ಅವರ ಹತ್ತಿರ ಜ್ಞಾನ ಇದೆ ಅದನ್ನು ನಮಗೆ ಕೊಡುತ್ತಿದ್ದಾರೆ. ಯಾವ ಜ್ಞಾನ ಕೊಡುತ್ತಾರೆ? ಪರಮಾತ್ಮನಿಗೆ ಬೀಜರೂಪ ಎಂದು ಹೇಳುತ್ತಾರೆ ಅಂದಾಗ ಅವರು ಪೂರ್ತಿ ವೃಕ್ಷದ ಜ್ಞಾನವನ್ನು ಕೊಡುತ್ತಾರೆ. ಜ್ಞಾನಸಾಗರರಾಗಿದ್ದಾರೆ, ಆ ಕಾರಣ ಪತಿತಪಾವನನಾಗಿದ್ದಾರೆ. ಬರೆಯುತ್ತೀರೆಂದರೆ ಬುದ್ಧಿವಂತಿಕೆಯಿಂದ ಬರೆಯಿರಿ. ಮೊದಲು ಪತಿತಪಾವನ ಎಂದು ಬರೆಯಬೇಕೋ, ಜ್ಞಾನಸಾಗರ ಎಂದು ಬರೆಯಬೇಕೋ? ಅವಶ್ಯವಾಗಿ ಜ್ಞಾನವಿದೆ ಆಗ ಪತಿತರನ್ನು ಪಾವನರನ್ನಾಗಿ ಮಾಡುತ್ತಾರೆ. ಅಂದಾಗ ಮೊದಲು ಜ್ಞಾನಸಾಗರ ನಂತರ ಪತಿತಪಾವನ ಎಂದು ಬರೆಯಬೇಕು. ಮನುಷ್ಯರು 84 ಜನ್ಮಗಳನ್ನು ಹೇಗೆ ಪಡೆದುಕೊಳ್ಳುತ್ತಾರೆ ಎನ್ನುವ ಜ್ಞಾನ ತಂದೆಯೇ ತಿಳಿಸುತ್ತಾರೆ. ಒಬ್ಬರದಷ್ಟೇ ಹೇಳುತ್ತಾರೇನು. ಇದು ರಾಜಯೋಗದ ಪಾಠಶಾಲೆ ಆಗಿದೆ. ಪಾಠಶಾಲೆಯಲ್ಲಿ ಬಹಳಷ್ಟು ಜನ ಇರುತ್ತಾರೆ, ಒಬ್ಬರಿಗಷ್ಟೇ ಓದಿಸುತ್ತಾರೇನು. ಬಾಬಾ ತಂದೆ, ಟೀಚರ್ ಆಗಿದ್ದಾರೆ ಅಂದಾಗ ಬಹಳಷ್ಟು ಜನರನ್ನು ಓದಿಸುತ್ತಾರೆ. ಬೇಹದ್ದಿನ ಮಕ್ಕಳನ್ನು ಓದಿಸುತ್ತಾರೆ ಹಾಗೂ ವೃದ್ಧಿ ಆಗುತ್ತಿರುತ್ತದೆ, ಇದನ್ನು ನೋಡುತ್ತೀರಿ. ವೃಕ್ಷ ನಿಧಾನ-ನಿಧಾನಕ್ಕೆ ವೃದ್ಧಿ ಆಗುತ್ತದೆ. ಸ್ವಲ್ಪ ಬೆಳೆದರೆ ಪಕ್ಷಿಗಳು ತಿನ್ನುತ್ತವೆ. ಈ ವೃಕ್ಷಕ್ಕೆ ಮಾಯೆಯ ಬಿರುಗಾಳಿ ಬರುತ್ತದೆ, ಯಾವುದರಿಂದ ಒಳ್ಳೊಳ್ಳೆಯವರು ಬಿಟ್ಟುಬಿಡುತ್ತಾರೆ ಎಂದು ನಿಮಗೆ ಗೊತ್ತಿದೆ. ಬಾಬಾ ಪ್ರಾರಂಭದಲ್ಲಿ ಮಕ್ಕಳ ಚಲನೆಯನ್ನು ನೋಡಿ, ನೀವು ಇರಲು ಸಾಧ್ಯವಿಲ್ಲ ಆದ್ದರಿಂದ ಶ್ರೀಮತದಂತೆ ನಡೆಯಿರಿ ಎಂದು ಹೇಳುತ್ತಿದ್ದರು. ಅವರು ಏನೇ ಆದರೂ ನಾವು ಓಡಿಹೋಗಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಆದರೂ ಅವರು ಓಡಿಹೋದರು. ಆಶ್ಚರ್ಯವಾಗಿ ಕೇಳಿದರು, ತಿಳಿಸಿದರು, ಓಡಿಹೋದರು ಎಂಬ ಯಾವ ಗಾಯನವಿದೆ ಅದನ್ನು ತಾವು ಪ್ರತ್ಯಕ್ಷ ರೂಪದಲ್ಲಿ ನೋಡುತ್ತಿದ್ದೀರಿ. ಆ ರೀತಿ ಆಗುತ್ತಾ ಹೋಗುತ್ತಿದೆ ಏಕೆಂದರೆ ಮಾಯೆ ಎದುರಿನಲ್ಲಿ ನಿಂತಿದೆ, ಮಲ್ಲಯುದ್ಧವಾಗುತ್ತದೆ. ಎರಡು ಕಡೆಯಿಂದ ಶಕ್ತಿವಂತರು ಇರುತ್ತಾರೆ. ನಂತರ ಕೆಲವರ ಗೆಲುವು, ಕೆಲವರ ಸೋಲು ಆಗುತ್ತದೆ. ಈಗ ನಿಮ್ಮದು ಮಾಯೆಯ ಜೊತೆ ಯುದ್ಧವಾಗಿದೆ. ಮಾಯೆಯ ಮೇಲೆ ವಿಜಯವನ್ನು ಪಡೆದು ನೀವು ರಾಜ್ಯ ಸ್ಥಾಪನೆ ಮಾಡುತ್ತಿದ್ದೀರಿ.

ವಿನಾಶದ ಚಿಹ್ನೆ ಬಾಂಬ್ಸ್ ಆಗಿದೆ ಎಂದು ತಂದೆಯು ತಿಳಿಸುತ್ತಾರೆ. ಶಾಸ್ತ್ರದಲ್ಲಿ ಹೊಟ್ಟೆಯಿಂದ ಒನಕೆಯನ್ನು ತೆಗೆದು ತಮ್ಮ ಕುಲದ ವಿನಾಶ ಮಾಡಿದರೆಂದು ಬರೆದಿದ್ದಾರೆ. ಪಾವನ ಪ್ರಪಂಚವನ್ನು ಮಾಡಲು ತಂದೆ ಬಂದಿದ್ದಾರೆ ಎಂದು ನಿಮಗೆ ಗೊತ್ತಿದೆ. ಅಂದಾಗ ಅವಶ್ಯವಾಗಿ ಹಳೆಯ ಪ್ರಪಂಚದ ವಿನಾಶ ಆಗಲೇಬೇಕು. ಇಲ್ಲವೆಂದರೆ ನಾವು ಎಲ್ಲಿ ರಾಜ್ಯ ಮಾಡುವುದು? ಈ ವಿದ್ಯೆಯ ಪ್ರಾಲಬ್ಧವೇ ಹೊಸ ಪ್ರಪಂಚವಾಗಿದೆ. ಮತ್ತೆ ಏನೆಲ್ಲಾ ಪುರುಷಾರ್ಥ ಮಾಡುತ್ತಾರೋ ಅದು ಈ ಪ್ರಪಂಚಕ್ಕಾಗಿ ಮಾಡುತ್ತಾರೆ. ಸನ್ಯಾಸಿಗಳು ಮಾಡುವುದೂ ಸಹ ಈ ಪ್ರಪಂಚಕ್ಕೆ ಮಾಡುತ್ತಾರೆ. ನಾವು ಇಲ್ಲಿಗೆ ಬಂದು ರಾಜ್ಯ ಮಾಡುತ್ತೇವೆಂದು ನೀವು ಹೇಳುತ್ತೀರಿ. ಆದರೆ ಗುಪ್ತ ರೂಪ ಆಗಿರುವ ಕಾರಣ ಮಕ್ಕಳು ಗಳಿಗೆ-ಗಳಿಗೆಗೂ ಮರೆತುಹೋಗುತ್ತಾರೆ. ದೊಡ್ಡ ವ್ಯಕ್ತಿಗಳು ಎಲ್ಲಿಗಾದರೂ ಹೋದರೆ ಎಷ್ಟು ಸ್ವಾಗತ ಮಾಡುತ್ತಾರೆ. ಲಂಡನ್ನಿಂದ ರಾಣಿ ಬಂದರೆ ಎಷ್ಟು ವಿಜೃಂಭಣೆಯಿಂದ ಸ್ವಾಗತ ಮಾಡುತ್ತಾರೆ. ಆದರೆ ತಂದೆ ಎಷ್ಟು ದೊಡ್ಡ ಅಥಾರಿಟಿ ಆಗಿದ್ದಾರೆ, ಆದರೆ ಮಕ್ಕಳ ವಿನಃ ಯಾರೂ ತಿಳಿದುಕೊಳ್ಳುವುದಿಲ್ಲ. ನಾವು ಶೋ ಮಾಡಲು ಸಾಧ್ಯವಿಲ್ಲ ಏಕೆಂದರೆ ಹೊಸ ಮಾತಾಗಿದೆ. ಮನುಷ್ಯರು ಇಲ್ಲಿಗೆ ಬ್ರಹ್ಮಾ ಎಲ್ಲಿಂದ ಬಂದಿದ್ದಾರೆ? ಎಂದು ತಬ್ಬಿಬ್ಬಾಗುತ್ತಾರೆ. ಏಕೆಂದರೆ ಈಗಿನ ಕಾಲದಲ್ಲಿ ಬಹಳ ಬಿರುದುಗಳನ್ನು ಇಟ್ಟುಕೊಳ್ಳುತ್ತಾರೆ. ಇದು ಅಂಧಕಾರ ಪ್ರಪಂಚವಾಗಿದೆ. ಸ್ವಲ್ಪವೂ ತಿಳಿದುಕೊಳ್ಳುವುದಿಲ್ಲ. ಒಂದುವೇಳೆ ಸಾಧು ಸಂತರಿಗೆ ಯಾರಿಗೆ ಸರ್ವವ್ಯಾಪಿ ಎಂದು ಹೇಳುತ್ತಿದ್ದೆವೋ ಅಂತಹ ನಮ್ಮ ತಂದೆ ಬಂದಿದ್ದಾರೆ, ಈಗ ಅವರು ಮುಕ್ತಿ ಜೀವನ್ಮುಕ್ತಿಯನ್ನು ಕೊಡುತ್ತಿದ್ದಾರೆ ಎಂದು ತಿಳಿದುಕೊಂಡರೆ, ಬಂದು ಆಸ್ತಿಯನ್ನು ತೆಗೆದುಕೊಳ್ಳಲಿ, ನಾನು ಬೇರ್ಪಡಿಸಲು ಆಗದೆ ಇರುವ ಹಾಗೆ ಕಾಲು ಹಿಡಿದುಕೊಳ್ಳಲಿ. ಆ ರೀತಿ ಆದರೆ ಇವರ ಹತ್ತಿರ ಜಾದು ಇದೆ ಹಾಗೂ ಗುರುಗಳ ತಲೆ ಕೆಟ್ಟಿದೆ ಎಂದು ಹೇಳುತ್ತಾರೆ. ಆದರೆ ಈಗ ಆ ರೀತಿ ಆಗುವುದಿಲ್ಲ ಮುಂದೆ ಆಗುತ್ತದೆ. ಕನ್ಯೆ ಬೀಷ್ಮಪಿತಾಮಹನಿಗೂ ಸಹ ಬಾಣ ಹಾಕಿದರು ಎಂದು ಹೇಳುತ್ತಾರೆ. ಬಾಣ ಹಾಕಿರುವುದರಿಂದ ಗಂಗೆ ಬಂದಿದೆ ಎಂದೂ ಸಹ ಹೇಳುತ್ತಾರೆ. ಅಂದಾಗ ಅಂತ್ಯದಲ್ಲಿ ಎಲ್ಲರಿಗೂ ಜ್ಞಾನಾಮೃತ ಕುಡಿಸಲಾಗುತ್ತದೆ ಎಂದು ಸಿದ್ಧ ಆಗುತ್ತದೆ. ಮನುಷ್ಯರು ಸ್ವಲ್ಪವೂ ತಿಳಿದಿಲ್ಲ. ಪರಮಾತ್ಮ ಸರ್ವವ್ಯಾಪಿ ಆಗಿದ್ದಾರೆ ಎಂದು ಹೇಳುತ್ತಾರೆ. ಬುದ್ಧನಿಗೂ ಸಹ ಸರ್ವವ್ಯಾಪಿ ಎಂದು ಹೇಳುತ್ತಾರೆ. ಇದಕ್ಕೆ ಕಲ್ಲುಬುದ್ಧಿ ಎಂದು ಕರೆಯಲಾಗುತ್ತದೆ. ನಾವೂ ಸಹ ಮೊದಲು ಕಲ್ಲುಬುದ್ಧಿಯವರಾಗಿದ್ದೆವು. ಭಗವಂತ ತಂದೆಗೆ (ಗಾಡ್ ಫಾದರ್ಗೆ)

ಎಂದೂ ಸಾಕಾರಿ ಅಥವಾ ಆಕಾರಿ ಎಂದು ಹೇಳುವುದಿಲ್ಲ, ಅವರು ನಿರಾಕಾರಿ ಆಗಿದ್ದಾರೆ ಎಂದು ತಂದೆ ಬಂದು ತಿಳಿಸುತ್ತಾರೆ. ಅವರಿಗೆ ಪರಮ ಆತ್ಮ ಎಂದು ಕರೆಯುತ್ತಾರೆ. ಅರ್ಧಕಲ್ಪ ಭಕ್ತಿ ಮಾಡಿದೆವು. ಭಕ್ತಿ ಮಾಡುತ್ತಾ-ಮಾಡುತ್ತಾ ಭಗವಂತ ಸಿಗುತ್ತಾರೆ ಎಂದು ಹೇಳುತ್ತಾರೆ, ಭಕ್ತಿ ಮಾಡುತ್ತಾ-ಮಾಡುತ್ತಾ ಯಾವಾಗ ದುರ್ಗತಿ ಆಗುತ್ತದೋ ಆಗ ಸದ್ಗತಿಯನ್ನು ನೀಡಲು ಭಗವಂತ ಸಿಗುತ್ತಾರೆ. ಸರ್ವರ ಸದ್ಗತಿದಾತ ಎಂದು ಹೇಳುತ್ತಾರಲ್ಲವೇ. ಪರಮಾತ್ಮ ಯಾವಾಗ ಯಾವ ರೂಪದಲ್ಲಿ ಬರುತ್ತಾರೆಂದು ಮನುಷ್ಯರಿಗೆ ಗೊತ್ತಿದೆಯೇನು, ದ್ವಾಪರಯುಗದಲ್ಲಿ ಕೃಷ್ಣನ ರೂಪದಲ್ಲಿ ಬರುತ್ತಾರೆಂದು ಹೇಳಿಬಿಡುತ್ತಾರೆ, ಇದಕ್ಕೆ ಘೋರ ಅಂಧಕಾರ ಎಂದು ಕರೆಯಲಾಗುತ್ತದೆ. ಕುಂಭಕರ್ಣನನ್ನು ನಿದ್ರೆಯಿಂದ ಏಳಿಸಿದರೂ ಏಳುವುದಿಲ್ಲ ಎಂದು ಹೇಳುತ್ತಾರಲ್ಲವೇ. ಈಗ ತಂದೆ ಪವಿತ್ರರಾಗಿ ಹಾಗೂ ಭಗವಂತನ ಡೈರೆಕ್ಟ್ ಗೀತೆಯನ್ನು ಕೇಳಿ ಎಂದು ಆದೇಶ ನೀಡಿದ್ದಾರೆ. 7 ದಿನದ ಭಟ್ಟಿಯಲ್ಲಿ ಕುಳಿತುಕೊಳ್ಳಿ. ದಾನ ಕೊಟ್ಟರೆ ಗ್ರಹಣ ಬಿಟ್ಟುಹೋಗುತ್ತದೆ. ಈಗ ಎಲ್ಲರಿಗೂ 5 ವಿಕಾರಗಳ ಗ್ರಹಣ ಹಿಡಿದಿದೆ ಆದ್ದರಿಂದ ಪತಿತರಾಗಿಬಿಟ್ಟಿದ್ದೀರಿ. ರಾವಣರಾಜ್ಯ ಆಗಿದೆಯಲ್ಲವೇ. ಮಕ್ಕಳೇ ಈಗ ನೀವು ನನ್ನವರಾಗಿ, ಬೇರೆ ಯಾರೂ ಇಲ್ಲ ಎಂದು ತಂದೆ ತಿಳಿಸುತ್ತಾರೆ. ಶ್ರೀ ಶ್ರೀ 108 ರ ಶ್ರೀಮತದ ಮೇಲೆ ನಡೆಯುವುದರಿಂದ ನೀವು 108 ವಿಜಯ ಮಾಲೆಯಲ್ಲಿ ಮಣಿ ಆಗಿಬಿಡುತ್ತೀರಿ. ನಾನು ಮಾಲೆಯ ಮಣಿ ಆಗುವುದಿಲ್ಲ. ನಾನಂತೂ ಅತೀತನಾಗಿದ್ದೇನೆ ಯಾವುದಕ್ಕೆ ಗುರುತು ಹೂವಾಗಿದೆ. ಮೇಲೆ ಎರಡು ಮಣಿಗಳು ಬ್ರಹ್ಮಾ-ಸರಸ್ವತಿ ಆಗಿದ್ದಾರೆ. ಪ್ರವೃತ್ತಿ ಮಾರ್ಗವಾಗಿದೆಯಲ್ಲವೇ. ನಿವೃತ್ತಿಮಾರ್ಗದವರು ಮಾಲೆಯಲ್ಲಿ ಮಣಿ ಆಗಲು ಸಾಧ್ಯವಿಲ್ಲ. ಹಾ ಭಲೆ ಪವಿತ್ರತೆಯನ್ನು ಧಾರಣೆ ಮಾಡುತ್ತಾರೆಂದರೆ ಇನ್ನೂ ಒಳ್ಳೆಯದು. ಆದರೆ ಈ ಗುರುಗಳು ಸದ್ಗತಿಯನ್ನು ಕೊಡಲು ಸಾಧ್ಯವಿಲ್ಲ. ಸದ್ಗತಿದಾತ ಒಬ್ಬರೇ ಸದ್ಗುರು ಆಗಿದ್ದಾರೆ. ಸದ್ಗುರುವಿಗೆ ಅಕಾಲ ಎಂದು ಕರೆಯುತ್ತಾರೆ, ಸದ್ಗುರುವೆಂದು ಒಬ್ಬ ಪರಮಾತ್ಮನಿಗೆ ಕರೆಯಲಾಗುತ್ತದೆ. ಸಾಕಾರ ಗುರುಗಳು ಅಕಾಲಮೂರ್ತರಾಗುತ್ತಾರೇನು. ಲೌಕಿಕ ತಂದೆ, ಟೀಚರ್, ಗುರುಗಳನ್ನಂತೂ ಮೃತ್ಯು ತಿಂದುಬಿಡುತ್ತದೆ. ನನ್ನಂತೂ ಮೃತ್ಯು ತಿನ್ನುವುದಿಲ್ಲ. ತಂದೆ ಎಷ್ಟು ಒಳ್ಳೊಳ್ಳೆ ಮಾತುಗಳನ್ನು ತಿಳಿಸುತ್ತಾರೆ, ಇಷ್ಟು ಸಹಜ ಮಾತುಗಳನ್ನು ಅರ್ಥ ಆಗಲಿಲ್ಲವೆಂದರೆ ತಂದೆ ಅವರಿಗೆ ಕೇವಲ ತಂದೆಯನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ಚಕ್ರವನ್ನೂ ಸಹ ನೆನಪು ಮಾಡಬೇಕು. ತಂದೆಯ ಜೊತೆ ಆಸ್ತಿಯನ್ನು ನೆನಪು ಮಾಡಬೇಕಾಗುತ್ತದೆ. ತಂದೆಯನ್ನು ನೆನಪು ಮಾಡಿದರೆ ವಿಕರ್ಮ ಭಸ್ಮವಾಗುತ್ತದೆ. ತಂದೆಯಂತೂ ಸಮ್ಮುಖದಲ್ಲಿ ಬಂದಿದ್ದಾರೆ. ತಂದೆಗೆ ಅಶರೀರಿ ಎಂದು ಕರೆಯಲಾಗುತ್ತದೆ. ಬ್ರಹ್ಮಾ-ವಿಷ್ಣು-ಶಂಕರರಿಗೆ ತಮ್ಮ-ತಮ್ಮ ಶರೀರವಿದೆ. ನನಗಾದರೆ ನನ್ನ ಶರೀರವಿಲ್ಲ. ನಿಮಗಾದರೆ ಮಾಮ, ಚಿಕ್ಕಪ್ಪ ಎಲ್ಲರೂ ಇದ್ದಾರೆ. ನನಗೆ ಮಾಮಾ, ಚಿಕ್ಕಪ್ಪ ಯಾರೂ ಇಲ್ಲ. ನಾನು ಬರುತ್ತೇನೆ ಆದರೆ ನೀವು ಹೇಗೆ ಬರುತ್ತೀರಿ, ನಾನು ಹೇಗೆ ಬರುತ್ತೇನೆ. ಓ ಗಾಡ್ ಫಾದರ್ ಎಂದು ಕರೆಯುತ್ತಾರೆ. ಆದರೆ ಎಲ್ಲಿಂದ ಬರುತ್ತೇನೆ? ಪರಮಧಾಮದಿಂದ. ನೀವು ಎಲ್ಲಿಂದ ಬರುತ್ತೀರೋ ಅದಕ್ಕೆ ಬ್ರಹ್ಮಾಂಡವೆಂದು ಕರೆಯಲಾಗುತ್ತದೆ. ಈ ಸಮಯದಲ್ಲಿ ನೀವು ಬ್ರಹ್ಮಾಮುಖವಂಶಾವಳಿ ರುದ್ರ ಜ್ಞಾನ ಯಜ್ಞದ ರಕ್ಷಕರಾಗಿದ್ದೀರಿ. ರಾಜಯೋಗದ ಶಿಕ್ಷಣ ಕೊಡುವಂತಹವರಾಗಿದ್ದೀರಿ, ರಾಜಯೋಗ ಕಲಿಸುವಂತಹ ನಿಮ್ಮ ಶಿಕ್ಷಕನಾಗಿದ್ದೇನಲ್ಲವೇ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಮಾಲೆಯಲ್ಲಿ ಮಣಿ ಆಗಲು ನನಗೆ ಒಬ್ಬ ಶಿವತಂದೆಯ ವಿನಃ ಬೇರೆ ಯಾರೂ ಇಲ್ಲ ಎಂದು ಪಕ್ಕಾ ಮಾಡಿಕೊಳ್ಳಬೇಕು. ನಷ್ಟೋಮೋಹ ಸ್ಮೃತಿಲಬ್ಧರಾಗಬೇಕು.

2. ಶ್ರೀ-ಶ್ರೀ 108ರ ಶ್ರೀ ಮತದ ಮೇಲೆ ಪೂರ್ತಿ ನಡೆಯಬೇಕು. ನನ್ನದು-ನನ್ನದು ಎನ್ನುವ ಗ್ರಹಣದಿಂದ ಬಿಡುಗಡೆ ಆಗಬೇಕು.

ವರದಾನ: ಬ್ರಾಹ್ಮಣ ಜೀವನದಲ್ಲಿ ಸದಾ ಸುಖದ ಅನುಭವ ಮಾಡುವಂತಹ ಮಾಯಾಜೀತ್, ಕ್ರೋಧಮುಕ್ತ ಭವ

ಬ್ರಾಹ್ಮಣ ಜೀವನದಲ್ಲಿ ಒಂದುವೇಳೆ ಸುಖದ ಅನುಭವ ಮಾಡಬೇಕಾದರೆ ಕ್ರೋಧಜೀತ್ ಆಗುವುದು ಅತೀ ಆವಶ್ಯಕವಾಗಿದೆ. ಭಲೆ ಯಾರಾದರೂ ಬೈಗುಳ ಕೊಡಲಿ, ಅವಮಾನ ಮಾಡಲಿ ಆದರೆ ನಿಮಗೆ ಕ್ರೋಧ ಬರಬಾರದು. ರೋಷ ತೋರಿಸುವುದೂ ಸಹ ಕ್ರೋಧದ್ದೇ ಅಂಶವಾಗಿದೆ. ಹೀಗಲ್ಲ ಕ್ರೋಧವಂತೂ ಮಾಡಲೇ ಬೇಕಾಗುವುದು, ಇಲ್ಲದೇ ಹೋದರೆ ಕೆಲಸ ತೆಗೆದುಕೊಳ್ಳಲು ಆಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸಮಯ ಪ್ರಮಾಣ ಕ್ರೋಧದಿಂದ ಕೆಲಸ ಕೆಡುವುದು ಮತ್ತು ಆತ್ಮೀಕ ಪ್ರಿತಿಯಿಂದ, ಶಾಂತಿಯಿಂದ ಕೆಟ್ಟುಹೋಗಿರುವ ಕಾರ್ಯವೂ ಸಹ ಸರಿಯಾಗಿಬಿಡುವುದು ಆದ್ದರಿಂದ ಈ ಕ್ರೋಧವನ್ನು ಬಹಳ ದೊಡ್ಡ ವಿಕಾರವೆಂದು ತಿಳಿದು ಮಾಯಾಜೀತ್, ಕ್ರೋಧಮುಕ್ತರಾಗಿ.

ಸ್ಲೋಗನ್: ತಮ್ಮ ವೃತ್ತಿಯನ್ನು ಈ ರೀತಿ ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿ ಯಾವುದರಿಂದ ಅನೇಕ ಆತ್ಮರುಗಳು ನಿಮ್ಮ ವೃತ್ತಿಯಿಂದ ಯೋಗ್ಯ ಮತ್ತು ಯೋಗಿಯಾಗಿ ಬಿಡಬೇಕು.